ಮಾಡಬೇಕು ಈ ಕೆಲಸಕ್ಕಾಗಿ 1999-2000ನೇ ಬಜೆಟ್‌ನಲ್ಲಿ ಎಷ್ಟು ಹಣವನ್ನು ಕಾದಿಟ್ಟಿದ್ದೀರಿ ಎಂದು ಹೇಳಬೇಕು? ಈಗ ಕೇವಲ ಬೆಂಗಳೂರು ದಕ್ಷಿಣ ಭಾಗವನ್ನು ಮಾತ್ರ ನೋಡುತ್ತಿದ್ದಾರೆ. ಹೀಗಾಗಿ ಬೆಂಗಳೂರು ಉತ್ತರ ಭಾಗವನ್ನು ಯಾರು ನೋಡುಕೊಳ್ಳುತ್ತಾರೆ? ಎಂದು ಕೇಳಬಯಸುತ್ತೇನೆ. ನಮ್ಮ ಉತ್ತರ ಭಾಗದ ಜನರಿಗೆ ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದಾರೆ. ಅಲ್ಲಿ ವಾಹನಗಳು ಸಂಜೆ ಹೊತ್ತಿನಲ್ಲಿ ಹೇಗೆ ಹೋಗುತ್ತವೆ ಎಂಬುದನ್ನು ನೋಡಬೇಕು. ಒಬ್ಬರಿಗೊಬ್ಬರು ಹೊಡೆದುಕೊಂಡು ಬೈದಾಡುತ್ತಾರೆ. ರೈಲ್ವೆಲೆವೆಲ್ ಕ್ರಾಸ್ ಕ್ಲೋಸ್ ಮಾಡಿಬಿಟ್ಟರೆ ನೂರಾರು ವಾಹನಗಳು ನಿಂತುಬಿಡುತ್ತವೆ. ಆ ಅವಸ್ಥೆಯನ್ನು ನೋಡಲು ಆಗುವುದಿಲ್ಲ, ಜನರಿಗೆ ತುಂಬಾ ಅನಾನುಕೂಲ ಮತ್ತು ತೊಂದರೆಯಾಗಿದೆ, ಅದನ್ನು ಸರಿಪಡಿಸಬೇಕೆಂದು ಕೋರುತ್ತೇನೆ.

ಶ್ರೀ ವಿ. ಸೋಮಣ್ಣ:— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜಣ್ಣನವರು ಹೇಳಿದ ಹಾಗೆ ಕೆಲಸದ ವೆಚ್ಚ ಜಾಸ್ತಿಯಾಗುತ್ತದೆ ಎಂದು ಹೇಳಿದ್ದಾರೆ. ರೈಲ್ವೆ ಅಧಿಕಾರಿಗಳನ್ನು, ಮಹಾನಗರ ಪಾಲಿಕೆ ಅಧಿಕಾರಿಗಳನ್ನು, ರೈಲ್ವೆ ಡಿವಿಜನಲ್ ಮ್ಯಾನೇಜರ್‌ರವರನ್ನು ಮತ್ತು ಶಾಸಕರುಗಳನ್ನು 5-6ನೇ ತಾರೀಖಿಗೆ ಕರೆಯಿಸುತ್ತೇನೆ. ಈ ಎರಡರಲ್ಲಿ ಯಾವುದನ್ನು ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ನಾಲ್ಕುಕೋಟಿ ಇದ್ದುದು ನಲವತ್ತು ಕೋಟಿ ರೂಪಾಯಿಗಳು ಆಗುತ್ತದೆಂದು ಹೇಳುತ್ತಾರೆ, ಅದನ್ನು ಪರಿಶೀಲಿಸಿ, ಈ ಕೆಲಸವು ತ್ವರಿತಗತಿಯಿಂದ ಆಗಬೇಕಾಗಿರುವುದರಿಂದ ಮತ್ತು ರೈಲ್ವೆ ಇಲಾಖೆಯವರು ಈ ಕೆಲಸವನ್ನು ಮಾಡಬೇಕಾಗಿರುವುದರಿಂದ, ನಗರಪಾಲಿಕೆಯವರು ಯಾವುದೇ ಹಣವನ್ನು ಇದಕ್ಕೆ ಮುಂಗಡವಾಗಿ ಇಟ್ಟುಕೊಂಡರೂ ಕೂಡ ಕೆಲಸವನ್ನು ರೈಲ್ವೇಯವರೇ ಮಾಡಬೇಕು, ನಾವು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ 5 ತಪ್ಪಿದರೆ 6ನೇ ತಾರೀಖು ನಗರಪಾಲಿಕೆಯವರು ರೈಲ್ವೇಯವರು, ಮತ್ತಿತರ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಶಾಸಕರೊಂದಿಗೆ ನಾನು ಸ್ಥಳಪರಿಶೀಲನೆ ಮಾಡಿ, ಮಾನ್ಯ ಜಾಫರ್ ಶರೀಫ್‌ರವರನ್ನು ಕೂಡ ಬರಲು ವಿನಂತಿಸಿಕೊಂಡು ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಿ ತತ್‌ಕ್ಷಣವೇ ಕ್ರಮ ಜರುಗಿಸಲು ಕ್ರಮ ತೆಗೆದುಕೊಳ್ಳುತ್ತೇನೆ.

ಮುಧೋಳ ತಾಲ್ಲೂಕಿನ ಮುಗಳಕೋಡ ಗ್ರಾಮಕ್ಕೆ 33 ಕೆ.ವಿ.ಎ. ಸ್ಟೇಷನ್

206(1252) ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮುಧೋಳ ತಾಲ್ಲೂಕಿನ ಮುಗಳಕೋಡ ಗ್ರಾಮಕ್ಕೆ 33 ಕೆವಿ. ಸ್ಟೇಷನ್ ಮಂಜೂರಾಗಿ 4 ವರ್ಷ ಕಳೆದರೂ ಕೂಡ ಕೆಲಸವನ್ನು ಪ್ರಾರಂಭಿಸದೇ ಇರಲು ಕಾರಣವೇನು?

ಆ) ಎಂದಿನಿಂದ ಈ ಕೆಲಸವನ್ನು ಪ್ರಾರಂಭಿಸಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು):—

ಅ) ಈ ಸಬ್-ಸ್ಟೇಷನ್ನನ್ನು ನಿರ್ಮಾಣಮಾಡಲು ಬೇಕಾಗುವ ಭೂಮಿಯನ್ನು

ಗುರುತಿಸುವಲ್ಲಿ, ಉಂಟಾದ ವಿಳಂಬವೇ, ಕೆಲಸವನ್ನು ಇದುವರೆವಿಗೆ ಪ್ರಾರಂಭಿಸದೇ ಇರಲು ಮುಖ್ಯ ಕಾರಣವಾಗಿದೆ. ಅಲ್ಲದೇ, ಈ ಕಾರ್ಯವನ್ನು ಕೈಗೊಳ್ಳಲು ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲ ಸೌಲಭ್ಯವನ್ನು ಪಡೆಯುವುದೂ ಅಗತ್ಯವಾಗಿದ್ದಿತ್ತು.

ಆ) ಭೂಮಿಯನ್ನು ಈಗ ಗುರುತಿಸಲಾಗಿದ್ದು, ಭೂ ಸ್ವಾಧೀನದ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಭೂಮಿಯನ್ನು ಮಂಡಳಿಯ ವಶಕ್ಕೆ ತೆಗೆದುಕೊಂಡ ಕೂಡಲೇ ಕೆಲಸವನ್ನು ಪ್ರಾರಂಭಿಸಲಾಗುವುದು. ಕೂಡಲೇ ಕೆಲಸವನ್ನು ಪ್ರಾರಂಭಿಸಲಾಗುವುದು. ಅಲ್ಲದೇ, ಈ ಕಾರ್ಯವನ್ನು ನಿರ್ವಹಿಸಲು ಗ್ರಾಮೀಣ ವಿದ್ಯುದೀಕರಣ ನಿಗಮವು ಈಗ ಸಾಲ ಸೌಲಭ್ಯವನ್ನು ಸಹ ಮಂಜೂರು ಮಾಡಿರುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರದಲ್ಲಿ ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಾರೆ. ಭೂಮಿಯನ್ನು ಈಗ ಗುರುತಿಸಲಾಗಿದ್ದು ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಭೂಮಿಯನ್ನು ಮಂಡಳಿಯ ವಶಕ್ಕೆ ತೆಗೆದುಕೊಂಡ ಕೂಡಲೇ ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದಾರೆ. ಮುಗಳಕೋಡ ಗ್ರಾಮದಲ್ಲಿ 33 ಕೆ.ವಿ. ಸ್ಟೇಷನ್‌ಗೆ ಸರಿಯಾದ ಜಮೀನು ಇಲ್ಲದಿದ್ದುರಿಂದ ಪಕ್ಕದ ಗ್ರಾಮದಲ್ಲಿ ಸರ್ವೆ ನಂಬರ್-277 ರಲ್ಲಿ ಇರುವ ಸರಕಾರಿ ಜಮೀನು ನಾಲ್ಕು ಎಕರೆಗಳಷ್ಟು ಮಂಜೂರು ಮಾಡಿದ್ದಾರೆ. ಆದರೂ ಕೂಡ ಮಂಡಳಿಯವರು ಕೆಲಸ ಪ್ರಾರಂಭ ಮಾಡಿಲ್ಲ. ಅದೇ ರೀತಿಯಲ್ಲಿ ಅಧಿಕಾರಿಗಳು ಸದನಕ್ಕೆ ಈ ರೀತಿಯಲ್ಲಿ ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಕ್ಕೆ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಹಾಗೆಯೇ ಈ ಕೆಲಸವನ್ನು ಎಷ್ಟು ದಿನಗಳಲ್ಲಿ ಪ್ರಾರಂಭ ಮಾಡುತ್ತೀರಿ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕೆಂದು ಸರಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶರಣ ಬಸಪ್ಪ ದರ್ಶನಾಪುರ್ :— ಮಾನ್ಯ ಅಧ್ಯಕ್ಷರೆ, ಮುಗಳಕೋಡ್ ಗ್ರಾಮದಲ್ಲಿ ಈಗಾಗಲೇ ಒಂದು 33 ಕೆ.ವಿ. ಸ್ಟೇಶನ್ ಸರಕಾರದಿಂದ ಮಂಜೂರು ಆಗಿದೆ. ನನಗೆ ಬಂದಿರತಕ್ಕಂಥ ಮಾಹಿತಿಗಳ ಪ್ರಕಾರ ಇಲ್ಲಿ ಎರಡು ಕಾರಣಗಳಿಗಾಗಿ ಕೆಲಸವು ಪ್ರಾರಂಭವಾಗಿಲ್ಲ. ಲ್ಯಾಂಡ್ ಅಕ್ವಿಸಿಶನ್ ಕೆಲಸ ಆಗಬೇಕು. ಮತ್ತು ಹಣಕಾಸಿನ ವ್ಯವಸ್ಥೆಯನ್ನು ಮಾಡಿದ್ದು ಮಂಜೂರಾತಿಯು ದೊರೆತಿದೆ. ಮೇ ತಿಂಗಳಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ :— ಮಾನ್ಯ ಅಧ್ಯಕ್ಷರೇ, ನಾಲ್ಕು ಎಕರೆ ಭೂಮಿಯನ್ನು ನಾನು ಸ್ವತಃ ಸರಕಾರದಿಂದ ಕೊಡಿಸಿದ್ದೇನೆ. ಹೀಗೆ ಭೂಮಿ ಸಿಕ್ಕಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ.

ಶ್ರೀ ಶರಣಬಸಪ್ಪ ದರ್ಶನಾಪುರ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಈಗ ನಾಲ್ಕು ಎಕರೆ ಭೂಮಿಯನ್ನು ಕೂಡ ಕೊಟ್ಟಿದ್ದಾರೆ. ಈಗ ಭೂಮಿ ಹಾಗೂ ಹಣಕಾಸಿನ ತೊಂದರೆ ನಮಗೆ ಇಲ್ಲ. ಮೇ ತಿಂಗಳಲ್ಲಿ ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.